ಆ) ಅಬಕಾರಿ ಮಾರಾಟ ವ್ಯವಸ್ಥೆಯಲ್ಲಿ ಬದಲಾವಣೆಯಾಗಿ ಹೆಚ್ಚಿನ ಜನರಿಗೆ ಸ್ವಯಂ ಉದ್ಯೋಗ ಕಲ್ಪನೆಯಲ್ಲಿ ಹರಾಜನ್ನು ವಿಕೇಂದ್ರೀಕರಿಸುವ ಇಲಾಖೆ ಸರ್ಕಾರಕ್ಕೆ ಇದೆಯೇ, ಇದ್ದರೆ ರೀತಿ, ನೀತಿಗಳೇನು?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) ಅಧಿಕೃತ ಸಾರಾಯಿ ಅಂಗಡಿಗಳು-649 ತಾಲ್ಲೂಕುವಾರು ವಿವರವನ್ನು ಈ ಕೆಳಗೆ ಒದಗಿಸಿದೆ.

1) ಮಂಗಳೂರು	273
2) ಬಂಟ್ವಾಳ	133
3) ಪುತ್ತೂರು	87
4) ಸುಳ್ಯ	86
5) ಬೆಳ್ತಂಗಡಿ	70
ಒಟ್ಟು	**649**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನಧಿಕೃತ ಸಾರಾಯಿ ಅಂಗಡಿಗಳು ನಡೆಯುತ್ತಿವೆ ಎಂಬ ಬಗ್ಗೆ ದೂರು ಅರ್ಜಿಗಳು ಬಂದಿದ್ದು ಅವುಗಳ ವಿವರ ಈ ಕೆಳಗಿನಂತಿದೆ.

1) ಮಂಗಳೂರು	- 22
2) ಬಂಟ್ವಾಳ	- 5
3) ಪುತ್ತೂರು	- 3
4) ಸುಳ್ಯ	- 9
5) ಬೆಳ್ತಂಗಡಿ	- 6
ಒಟ್ಟು	**45**

ಈ ದೂರಿನಲ್ಲಿ ಬಂದಿರುವ ಸತ್ಯಾಂಶಗಳನ್ನು ಪರಿಶೀಲಿಸಿ ಇಂತಹ ಅಂಗಡಿಗಳನ್ನು ಮುಚ್ಚಿಸಲು ಅಬಕಾರಿ ಅಧಿಕಾರಿಗಳು ಕ್ರಮ ಜರುಗಿಸುತ್ತಿದ್ದಾರೆ.

ಆ)-ಇಲ್ಲ-

ಆರಾಧನಾ ಯೋಜನೆಯಡಿ ಬಿಡುಗಡೆ ಮಾಡಿರುವ ಹಣ

2717 (3387) ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕಳೆದೆರಡು ವರ್ಷಗಳಲ್ಲಿ ಆರಾಧನಾ ಯೋಜನೆಯಲ್ಲಿ ಸರ್ಕಾರ ಬಿಡುಗಡೆ ಮಾಡಿದ ಮೊತ್ತವೆಷ್ಟು; ವಿನಿಯೋಗಿಸದೆ ಉಳಿದಮೊತ್ತವೆಷ್ಟು? (ಜಿಲ್ಲಾವಾರು ವಿವರ ಒದಗಿಸುವುದು)

2) ಆರಾಧನಾ ಯೋಜನೆಯಡಿಯಲ್ಲಿ ಉಪಯೋಗ ಪಡೆಯುವ ಸಂದರ್ಭದಲ್ಲಿ ಸರ್ಕಾರಿ ಸ್ವಾಮ್ಯದಲ್ಲಿರುವ ಜಾಗದಲ್ಲಿ ಹಿಂದಿನಿಂದ ಆರಾಧಿಸಿ ಕೊಂಡು ಬರುತ್ತಿರುವ ದೇವಾಲಯಗಳಿಗೆ ಉಪಯೋಗಿಸಲು ಅನುಮತಿ ನೀಡಲಾಗುವುದೆ?

ಶ್ರೀ ಬಾಬುರಾವ್ ಚಿಂಚನಸೂರ (ಮುಜರಾಯಿ ರಾಜ್ಯ ಸಚಿವರು) :

1) ಕಳೆದೆರಡು ವರ್ಷಗಳಲ್ಲಿ ಆರಾಧನಾ ಯೋಜನೆಯ ಬಿಡುಗಡೆ ಮಾಡಿದ ಮೊತ್ತ 9.00 ಕೋಟಿ

1998-99	5.00 ಕೋಟಿ
1999-2000	4.00 ಕೋಟಿ
ಒಟ್ಟು	**9.00 ಕೋಟಿ**

ಈ ಯೋಜನೆ ಪ್ರಾರಂಭವಾದಾಗಿನಿಂದ (1991-92) ಈವರೆಗೆ (1999-2000) ಒಟ್ಟು 48,21,00,000-00ರೂಗಳು ಬಿಡುಗಡೆ ಮಾಡಿದ್ದು ಈ ಹಣದಲ್ಲಿ ಒಟ್ಟು 26,08,46, 334-00ರೂಗಳು ಖರ್ಚು ಮಾಡಲಾಗಿದೆ. (ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ).

2) ಈ ದೇವಾಲಯಗಳು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ, ಹಿಂದೂಳಿದವರ್ಗ ಲಂಬಾಣಿ ತಾಂಡ ಹಾಗೂ ಹಿಂದೂಳಿದ ಪಂಗಡ 1 ಮತ್ತು ಅಲ್ಪಸಂಖ್ಯಾತ ಕೋಮಿನವರು ವಡ್ಡರ ಕೇರಿ, ವಾಸಿಸುವ ಸ್ಥಳದಲ್ಲಿ ಕೇರಿಗಳಲ್ಲಿ ಇದ್ದ ಪಕ್ಷದಲ್ಲಿ ಇಂತಹ ದೇವಾಲಯಗಳಿಗೆ ನಿಯಮಾನುಸಾರ ಹಣ ಬಿಡುಗಡೆ ಮಾಡಬಹುದಾಗಿರುತ್ತದೆ.

ಅನುಬಂಧ

ಕ್ರಮ ಸಂಖ್ಯೆ ಸ	ಜಿಲ್ಲೆ	1991-92ರಿಂದ 1998-99 ವರೆಗೆ ಬಿಡುಗಡೆ ಮಾಡಿರುವ ಅನುದಾನ	ವೆಚ್ಚ ಮಾಡಲಾದ ಅನುದಾನ	ಉಳಿಕೆ	ಕೈಗೊಂಡ	ಪೂರ್ಣಗೊಂಡ ಕಾಮಗಾರಿ	ಪ್ರಗತಿಯಲ್ಲಿರುವ
1	2	3	4	5	6	7	8
1)	ಬೆಂಗಳೂರು ನಗರ	3,61,93,201	2,40,08,932	1,11,84,269	773	460	313
2)	ಬೆಂಗಳೂರು ಗ್ರಾಮಾಂತರ	2,09,98,934	1,23,71,443	86,27,491	381	178	203
3)	ಕೋಲಾರ	2,53,95,450	69,70,138	1,84,25,342	754	387	367
4)	ಮಂಡ್ಯ	1,87,23,180	97,25,499	89,97,681	1024	568	456
5)	ಮೈಸೂರು	2,32,29,373	1,40,25,342	92,04,031	491	301	190
6)	ತುಮಕೂರು	2,86,97.927	1,20,16,818	1,66,81,109	1439	793	646
7)	ಚಿತ್ರದುರ್ಗ	1,93,81,941	75,72,151	1,18,09,790	883	505	378
8)	ದಾವಣಗೆರೆ	55,13,801	15,31,417	39,82,384	-	-	-
9)	ಚಾಮರಾಜನಗರ	1,05,54,614	69,98,160	35,56,454	251	100	151
10)	ಬಳ್ಳಾರಿ	1,78,97,867	1,07,31,680	71,76,187	739	603	136
11)	ಶಿವಮೊಗ್ಗ	1,95,73,001	99,45,324	98,27,677	720	479	241

1	2	3	4	5	6	7	8
12)	ಚಿಕ್ಕಮಗಳೂರು	1,37,93,843	67,85,026	70,80,817	421	251	170
13)	ಹಾಸನ	1,70,07,493	1,20,50,395	50,47,098	819	699	120
14)	ಕೊಡಗು	63,28,360	8,55,077	54,73,283	137	83	54
15)	ಉತ್ತರ ಕನ್ನಡ	1,88,86,735	85,47,683	1,03,39,052	295	247	48
16)	ದಕ್ಷಿಣ ಕನ್ನಡ	1,82,84,454	1,33,81,458	49,02,996	432	344	88
17)	ಉಡುಪಿ	1,40,33,846	78,29,140	62,04,706	307	227	80
18)	ಧಾರವಾಡ	1,16,33,213	90,99,331	25,33,882	690	600	96
19)	ಗದಗ್	1,00,91,656	77,18,891	23,72,765	782	509	273
20)	ಹಾವೇರಿ	1,55,90,489	30,68,326	1,25,22,163	806	238	568
21)	ಬೆಳಗಾಂ	3,73,15,430	2,39,09,212	1,34,06,218	1423	903	520
22)	ಬಿಜಾಪುರ	81,36,797	1,39,86,157	41,50,640	706	542	164
23)	ಬಾಗಿಲಕೋಟೆ	1,29,81,503	88,24,518	41,56,985	503	401	102
24)	ರಾಯಚೂರು	1,93,62,878	1,05,67,510	87,95,348	1631	779	852
25)	ಕೊಪ್ಪಳ	36,91,835	-	36,91,835	-	-	-
26)	ಬೀದರ್	1,25,26,220	41,71,210	83,55,010	87	87	
27)	ಗುಲ್ಬರ್ಗಾ	2,71,85,927	1,41,65,496	1,30,20,431	1067	320	747
		48,21,00,000	**26,08,46,334**	**22,12,53,666**	**17561**	**10604**	**6957**